ನಿಮ್ಮೂರಿನಲ್ಲಿ ನೀನು ಸಿಗದೆ ವಾಪಸು ಹೋದರೆ, ನಾನು ಅಪೂರ್ಣವಾಗಿಬಿಡುತೀನಿ... ಪ್ಲೀಸ್...'

'ಸಂಜೆ ಮೇಲೆ ಆಗೋದಿಲ್ಲ, ಆರ್ದ್ರಾ...' ನನ್ನೊಳಗಿನ ಜಾಗ್ರತೆಯೇ ಉಚ್ಚರಿಸಿತು. 'ಬೇಕಿದ್ದರೆ ಈಗಲೇ ಬರಬಲ್ಲೆ... ಐ ಹ್ಯಾವ್ ಎ ಡಿನ್ನರ್ ಮೀಟ್ ಎಟ್ ಐಟೀಪಿಎಲ್ಲ್... ವಾಟ್ ಡು ಯು ಸೇ?'

'ಎಷ್ಟು ಹೊತ್ತಾಗುತ್ತೆ?'

'ಅರ್ಧ ಗಂಟೆ... ಅಲ್ಲಿ ಬಂದ ಮೇಲೆ ಒಂದರ್ಧ ಗಂಟೆ ಇರಬಲ್ಲೆ ಅಷ್ಟೇ...'

'ನಿನ್ನ ಅರ್ಧವೂ ನನಗೆ ಪೂರ್ತಿಯೇ, ಅಭೀ...' ಆರ್ದ್ರಾ ಹೀಗೆ ಹೇಳುವಾಗ ಮನಸ್ಸು ಕುಟುಕಿತಾದರೂ, ಎದೆಯೊಳಗಿನ ತಾಂಡವ ತಗ್ಗಿತು. 'ವೆಲ್ಲ್... ಐ ವೋಂಟ್ ಬ್ಲೇಮ್ ಯು... ನಿನ್ನ ಕೆಲಸ ಹೇಗೇಂತ ನನಗೆ ಗೊತ್ತು...'



'.....'

'ಸರಿ... ಬೇಗ ಬಂದುಬಿಡು... ಕಾಯುತಿರುತೀನಿ... ಹ್ಞಾಂ... ನಾನಿನ್ನೂ ಊಟ ಮಾಡಿಲ್ಲ. ಲೆಟ್ಸ್ ಸಿಟ್ ಎಟ್ ದಿ ಪೂಲ್ ಸೈಡ್... ಆಮೇಲೆ ನಿನಗೂ ಬಿಡುವೂ, ಮೂಡೂ ಇದ್ದರೆ ರೂಮಿಗೆ ಹೋಗೋಣ...'

ಅಷ್ಟರಲ್ಲಿ, ಹಿಂದಿನಿಂದ ಯಾರೋ ಕಂಡಾಪಟ್ಟೆ ಹಾರ್ನುಗೈದರೆಂದು, ಅವಸರದಲ್ಲಿ ಹ್ಞೂಂಗುಟ್ಟಿ ಫೋನು ಬಡಿಚಿದೆ.

## ಮೂರು:

## *(i)*

ವಿಂಡ್ಸರ್ ಮ್ಯಾನರು ತಲುಪಿದಾಗ ಮೂರೂ ಇಪ್ಪತ್ತು. ಅರ್ಧ ತಾಸೆಂದರೆ ಅರ್ಧ ತಾಸು ಮಾತ್ರ ಇರುವುದು... ಎಂದು ಕಾರು ನಿಲ್ಲಿಸುವಾಗ, ಮನಸಿನಲ್ಲಿ ಒತ್ತಿ ಒತ್ತಿ ಹೇಳಿಕೊಂಡೆ. ಆಫೀಸಿಗೆ ಫೋನ್ ಮಾಡಿ, ಐದು ಗಂಟೆಯ ಮೀಟಿಂಗನ್ನು ನಾಳೆಗೆ ಮುಂದೂಡುವುದೆಂದು ಆದೇಶಿಸಿದೆ. ಕಾರಿನಿಂದಿಳಿದು – ಸೊಂಟದ ಬೆಲ್ಟು ತಿದ್ದಿಕೊಂಡು, ಬದಿಗನ್ನಡಿಯಲ್ಲಿ ಮೋರೆಯಿಕ್ಕಿ ಅಷ್ಟಿಷ್ಟು ಮುಡಿ

